# ಗೋವಿಂದ ಕನಸು

ಗೋವಿಂದ ಹೀರೊ ಆಗಿದ್ದಾಗ ಜನಪ್ರಿಯ ಜೋಡಿ ಎಂಬಂತೆ ನಟಿಸಿದ್ದು ರವೀನಾ ಟಂಡನ್, ಜೂಹಿ ಚಾವ್ಲಾ ಮತ್ತು ಕರಿಷ್ಮಾ ಕಪೂರ್ ಜೊತೆಗೆ. ಈ ಮೂವರು ಹೀರೋಯಿನ್‌ಗಳ ಜೊತೆಗೆ ನಟಿಸಿದ ಬಹುತೇಕ ಚಿತ್ರಗಳು ಹಿಟ್ ಆಗಿವೆ. ಆದರೆ ಗೋವಿಂದಗೆ ಆ ಕಾಲದಲ್ಲಿ ಇದ್ದ ಒಂದು ಆಸೆಯೆಂದರೆ ಮಾಧುರಿ ದೀಕ್ಷಿತ್ ಜೊತೆಗೆ ಸೂಪರ್‌ಹಿಟ್ ಚಿತ್ರದಲ್ಲಿ ನಟಿಸುವುದಂತೆ.

ಹಾಗೆಂದು ಟೀವಿಯಲ್ಲಿ 'ಸಾರೆಗಮಪ ಲಿಟ್ಲ್ ಚಾಂಪ್ಸ್' ರಿಯಾಲಿಟಿ ಶೋನಲ್ಲಿ ಸ್ವತಃ ಗೋವಿಂದ ಒಪ್ಪಿಕೊಂಡಿದ್ದಾರೆ. 89 ಮತ್ತು 90ರಲ್ಲಿ ಈ ಜೋಡಿ ಮೂರು ಸಿನಿಮಾಗಳಲ್ಲಿ ನಟಿಸಿತ್ತು. ಪಾಪ್ ಕಾ ಅಂತ್, ಮಹಾಸಂಗ್ರಾಮ್ ಮತ್ತು ಇಜ್ಜತ್‌ದಾರ್. ಆದರೆ ಅದು ಯಾವುದೂ ಎರಡು ವಾರಗಳೂ ಓಡಲಿಲ್ಲ. ಎಂಟು ವರ್ಷಗಳ ಬಳಿಕ ಮತ್ತೆ 'ಬಡೆ ಮಿಯಾ ಛೋಟೆ ಮಿಯಾ'ದಲ್ಲಿ ಜೋಡಿ ಆದರೂ ಆ ಚಿತ್ರವೂ ಸುದ್ದಿ ಮಾಡಲಿಲ್ಲ. ಕಳೆದ ವರ್ಷ ಬಿಡುಗಡೆಯಾದ 'ರಂಗೀಲಾ ರಾಜಾ' ಚಿತ್ರದಲ್ಲಿ ನಟಿಸಿದ ಬಳಿಕ ಗೋವಿಂದ ಬೆಳ್ಳಿ ತೆರೆಯಿಂದ ದೂರವೇ ಆಗಿದ್ದಾರೆ. ಹಾಗಾಗಿ ಮತ್ತೆ ಮಾಧುರಿ ಜೊತೆಗೆ ನಟಿಸಿ ಸೂಪರ್ ಹಿಟ್ ಅನ್ನಿಸಿಕೊಳ್ಳುವ ಛಾನ್ಸ್ ಕಡಿಮೆಯೇ. ಗೋವಿಂದ ಬಾಯಿಯಿಂದ ಈ ಆಸೆ ಕೇಳಿದ ಮಾಧುರಿ ದೊಡ್ಡದೊಂದು ಬಿನಾಕಾ ಸ್ಮೈಲ್ ನೀಡಿ ಸುಮ್ಮನಾದರಂತೆ.





## ಸಾರಾ ಫುಲ್ ಖುಷ್

ಕಳೆದ ವಾರ 12ರಂದು ಸಾರಾ ಅಲಿ ಖಾನ್‌ಗೆ 25 ವರ್ಷ ಆಯಿತು. ತನ್ನ ಬರ್ತ್‌ಡೇ ಆಚರಣೆಯ ಸಂಭ್ರಮದ ಕ್ಷಣಗಳನ್ನು ಆಕೆ ಇನ್‌ಸ್ಟಾಗ್ರಾಮ್‌ಗೆ ಏರಿಸಿದ್ದಾಳೆ. ಬಣ್ಣ ಬಣ್ಣದ, ವಿವಿಧ ಆಕಾರದ ಬಲೂನ್‌ಗಳು ಮತ್ತು ವೈವಿಧ್ಯಮಯ ಕೇಕ್‌ಗಳ ರಾಶಿಯೇ ಆಕೆಗೆ ಕಾಣಿಕೆಯಾಗಿ ಬಂದಿತ್ತು. 'ಕೇದಾರನಾಥ್' ಸಿನಿಮಾದಲ್ಲಿ ಸುಶಾಂತ್‌ಸಿಂಗ್ ಜೊತೆಯಾಗಿ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಈಕೆ, ರಣ್‌ವೀರ್ ಸಿಂಗ್ ಜೊತೆಗೆ ನಟಿಸಿದ 'ಸಿಂಬಾ' ಬಾಕ್ಸಾಫೀಸ್‌ನಲ್ಲಿ ಯಶಸ್ವಿಯಾದ ಬಳಿಕ ಕೈತುಂಬ ಅವಕಾಶಗಳು ಬಂದವು.

1995ರಲ್ಲಿ ಸೂಪರ್ ಹಿಟ್ ಆದ ಡೇವಿಡ್ ಧವನ್ ನಿರ್ದೇಶನದ 'ಕೂಲಿ ನಂಬರ್ 1' ಚಿತ್ರದ ರಿಮೇಕ್‌ನಲ್ಲಿ ಸಾರಾ ಈಗ ನಟಿಸುತ್ತಿದ್ದಾಳೆ. ಇದರಲ್ಲಿ ವರುಣ್ ಧವನ್ ಹೀರೊ. ಗೋವಿಂದ ಮತ್ತು ಕರಿಷ್ಮಾ ಕಪೂರ್ ಇಬ್ಬರಿಗೂ ಸಾಕಷ್ಟು ಹೆಸರು ತಂದುಕೊಟ್ಟ ಆ ಸಿನಿಮಾದ ಟೈಟಲನ್ನು ರಿಮೇಕ್‌ಗೂ ಹಾಗೆಯೇ ಉಳಿಸಲಾಗಿದೆ. ಇನ್ನೊಂದೆಡೆ ದಕ್ಷಿಣದ ಜನಪ್ರಿಯ ತಾರೆ ಧನುಷ್ ಮತ್ತು ಉತ್ತರದ ಜನಪ್ರಿಯ ತಾರೆ ಅಕ್ಷಯ ಕುಮಾರ್ ನಟಿಸುತ್ತಿರುವ 'ಅತ್ರಂಗಿ ರೇ' ಚಿತ್ರದಲ್ಲೂ ಸಾರಾ ನಾಯಕಿ.

ಕೊರೊನಾ ಲಾಕ್‌ಡೌನ್‌ನಿಂದ ಮನೆಯಲ್ಲೇ ಕುಳಿತು ಸಾರಾಗೆ ತಲೆ ಚಿಟ್ಟು ಹಿಡಿದು ಹೋಗಿದೆಯಂತೆ. ಸೋದರ ಇಬ್ರಾಹಿಂ ಅಲಿ ಖಾನ್ ಜೊತೆಗೆ ಗೋವಾದ ಹನಿಮಳೆಯಲ್ಲಿ ಪ್ರಶಾಂತ ರಸ್ತೆಗಳಲ್ಲಿ ಸೈಕಲ್ ಹೊಡೆಯುತ್ತಾ ಕಳೆದ ವಾರ ಆಕೆ ಸಮಯ ಕಳೆದಿದ್ದಾಳೆ. ಈಜುಕೊಳ ಮತ್ತು ಯೋಗ ಆಕೆಯನ್ನು ಏಕತಾನತೆಯಿಂದ ಹೊರತಂದಿದೆಯಂತೆ. ಸದ್ಯಕ್ಕೆ ಆಕೆ ಫುಲ್‌ಖುಷ್ ಅಂತೆ.

■ ಬಿಂದು